ಇ) ಹೌದು.

ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಹಾವೇರಿ ಇದರ ಆಡಳಿತ ಮಂಡಳಿಯ ಚುನಾಯಿತ ಸದಸ್ಯರ ಬಗ್ಗೆ

676 -ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಹಾವೇರಿ ಇದರ ಆಡಳಿತ ಮಂಡಳಿಯ ಚುನಾಯಿತ ಸದಸ್ಯರ ಸಂಖ್ಯೆ ಎಷ್ಟು ಹಾಗೂ ಸರ್ಕಾರ ನಾಮನಿರ್ದೇಶನ ಮಾಡಿದ ಸದಸ್ಯರ ಸಂಖ್ಯೆ ಎಷ್ಟು?*

ಆ) *ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಸರ್ಕಾರ ಸದಸ್ಯರನ್ನು ನಾಮನಿರ್ದೇಶನ ಮಾಡಿರುವುದು ನಿಜವೇ?*

ಇ) *ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಕಂಡ ಕಾರ್ಖಾನೆಯ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ ಇದ್ದ ರಿಟ್ ಪೆಟಿಷನ್ ಹಾಗೂ ರಿಟ್ ಅಫೀಲ್‌ಗಳಲ್ಲಿ ಈ ವರೆಗೆ ಆಗಿರುವ ಆದೇಶಗಳೇನು, ಹಾಗೂ ಸರ್ಕಾರ ನ್ಯಾಯಾಲಯದ ಆದೇಶಗಳನ್ನು ಪಾಲಿಸಿದೆಯೇ (ಆದರ ವಿವರ ನೀಡಿ)?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಚುನಾಯಿತ ಸದಸ್ಯರ ಸಂಖ್ಯೆ 18 ಸರ್ಕಾರದ ನಾಮ ನಿರ್ದೇಶನ ಮಾಡಿದ ಸದಸ್ಯರ ಸಂಖ್ಯೆ 11.

ಆ) ಇಲ್ಲ.

ಇ) ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 3517:94 ರಲ್ಲಿ ದಿನಾಂಕ 11-2-94ರಂದು ಸರ್ಕಾರವು ಒಟ್ಟು ಸದಸ್ಯರ $\frac{1}{3}$ ಕ್ಕಿಂತ ಹೆಚ್ಚಿಗೆ ನಾಮ ನಿರ್ದೇಶನ ಮಾಡಬಾರದೆಂದು ಮಧ್ಯಂತರ ಆದೇಶ ನೀಡಿದೆ ಮತ್ತು ರಿಟ್ ಅರ್ಜಿ ಸಂಖ್ಯೆ 4245:94ರಲ್ಲಿ ದಿನಾಂಕ 16-2-94ರಂದು ಆಡಳಿತ ಮಂಡಳಿಯು ಪ್ರಥಮ ಸಭೆ ಹಾಗೂ ಚುನಾವಣೆಯನ್ನು ಕಾನೂನಿನ ಪ್ರಕಾರ ನಡೆಸುವಂತೆ ಹಾಗೂ ಕೇವಲ 6 ಮಂದಿ ನಾಮ ನಿರ್ದೇಶಿತ ಸದಸ್ಯರು ಮಾತ್ರ ಆದರಲ್ಲಿ ಭಾಗವಹಿಸುವಂತೆ ಮಧ್ಯಂತರ ಆದೇಶ ನೀಡಿದೆ. ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಫೀಲ್ ಸಂಖ್ಯೆ ಜಿಲ೦ ಮತ್ತು 581:94 (ಸಿಎಸ್)ಗಳಲ್ಲಿ ದಿನಾಂಕ 3-3-94 ರಂದು ಮಧ್ಯಂತರ ಆದೇಶ ನೀಡಿ ಮೇಲ್ಕಂಡ ರಿಟ್ ಅರ್ಜಿಗಳ ಎರಡೂ ಮಧ್ಯಂತರ ಆದೇಶಗಳಿಗೆ ತಡೆಯಾಜ್ಞೆ ನೀಡಿ ಆಡಳಿತ ಪದಾಧಿಕಾರಿಗಳ ಚುನಾವಣೆಯನ್ನು ಮುಂದೂಡಿರುತ್ತದೆ. ರಿಟ್ ಅರ್ಜಿ ಹಾಗೂ ರಿಟ್ ಅಫೀಲುಗಳು ಇನ್ನೂ ಅಂತಿಮವಾಗಿ ಇತ್ಯರ್ಥವಾಗಿಲ್ಲ.

ಕಡಂದಲೆ ವಿದ್ಯಾರ್ಥಿ ನಿಲಯ ಕುರಿತು

565-ಶ್ರೀ ಕೆ.ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಡಂದಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯವು ಬಾಡಿಗೆ ಕಟ್ಟಡದಲ್ಲಿದ್ದು ತುಂಬಾ ತೊಂದರೆ ಉಂಟಾದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅಲ್ಲಿಗೆ ಸ್ಥಳದ ಮಂಜೂರಾಗಿದೆಯೇ?*

ಇ) *ಸರ್ಕಾರವು ಆ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ರಚಿಸಲು ಏನು ಕ್ರಮ ಕೈಗೊಂಡಿದೆ?*

ಈ) ಯಾವಾಗ ಆದಕ್ಕೆ ಸ್ವಂತ ಕಟ್ಟಡ ಒದಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) :

ಅ) ಇಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ಆ) ಹೌದು. ಸರ್ವೆ ನಂಬರ್ 218-2ರಲ್ಲಿ ಒಂದು ಎಕರೆ ಜಮೀನನ್ನು ಇಲಾಖೆಯ ಸ್ವಾಧೀನಕ್ಕೆ ಪಡೆಯಲಾಗಿದೆ.

ಇ) ಸದರಿ ಸ್ಥಳದಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡದ ನಕ್ಷೆ ಮತ್ತು ಅಂದಾಜು ವೆಚ್ಚ ಈಗಾಗಲೇ ಸಿದ್ಧವಾಗಿದ್ದು, ತಾಂತ್ರಿಕ ಅನುಮೋದನೆ ಪಡೆಯಲಾಗುತ್ತಿದೆ.

ಈ) ಈ ಬಗ್ಗೆ 1994-95ನೇ ಶೈಕ್ಷಣಿಕ ವರ್ಷದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಮೂಡಬಿದ್ರೆ ಮತ್ತು ಮುಲ್ಕಿಯಲ್ಲಿ ಬಾಲಕಿಯರ ವಿದ್ಯಾರ್ಥಿನಿಲಯಗಳು

566-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆ ಮತ್ತು ಮುಲ್ಕಿಯಲ್ಲಿ ತೆರೆಯಬೇಕೆಂದಿರುವ ವಿದ್ಯಾರ್ಥಿನಿನಿಲಯದ ನಿರ್ಧಾರ ಯಾವ ಹಂತದಲ್ಲಿದೆ.

ಆ) ಸಾಕಷ್ಟು ವಿದ್ಯಾ ಸಂಸ್ಥೆಗಳನ್ನು ಹೊಂದಿರುವ ಆ ನಗರದಲ್ಲಿ ವಿದ್ಯಾರ್ಥಿನಿಯರಿಗೆ ಆಗುವ ತೊಂದರೆಯನ್ನು ಸರ್ಕಾರ ಪರಿಶೀಲಿಸಿದೆಯೇ?

ಇ) ಸರ್ಕಾರ ಯಾವಾಗ ಅಲ್ಲಿ ವಿದ್ಯಾರ್ಥಿನಿ ನಿಲಯ ತೆರೆಯುವುದು?

ಈ) ಅಲ್ಲಿ ವಿದ್ಯಾರ್ಥಿನಿ ನಿಲಯ ತೆರೆಯಲು ಸರ್ಕಾರಕ್ಕೆ ಇರುವ ತೊಂದರೆಯೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಪರಿಶೀಲನೆಯಲ್ಲಿದೆ

ಆ) ಹೌದು

ಸರ್ಕಾರಕ್ಕೆ ಯಾವ ತೊಂದರೆಯೂ ಇಲ್ಲ. ಸಂಪನ್ಮೂಲಗಳನ್ನು ಮತ್ತು ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಸ್ಥಳದಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಕಾರ್ಯಕ್ರಮ ಕೈಗೊಳ್ಳಲಾಗುವುದು.

ಭೂ ಸುಧಾರಣೆಯಲ್ಲಿ ಬಾಕಿ ಇರುವ ವಿವಾದಗಳು

567-ಕೆ.ಸೋಮಪ್ಪ ಸುವರ್ಣ (ಮೂಡಬಿದಿರೆ): ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣೆಯ ಎಷ್ಟು ಕೇಸುಗಳು ಇತ್ಯರ್ಥವಾಗದೆ ಬಾಕಿ ಉಳಿದಿರುತ್ತವೆ?

ಆ) ಕಳೆದ 20 ವರ್ಷಗಳಿಂದ [illegible]ತೆ ಅನುಭವಿಸುತ್ತಿರುವ ಆ ಗೇಣಿದಾರರ ರಕ್ಷಣೆಗೆ ಸರ್ಕಾರ ಏನು ಕ್ರಮ ಕೈಕೊಂಡಿದೆ?

ಇ) ನ್ಯಾಯಾಲಯದ ಹಂತದಲ್ಲಿ ತೀರ್ಮಾನವಾಗುವಲ್ಲಿ ತಡವಾಗುತ್ತಿರುವುದರಿಂದ ಸರ್ಕಾರ ಶೀಘ್ರ ನ್ಯಾಯ ಒದಗಿಸಲು ಏನು ಕ್ರಮ ಕೈಗೊಳ್ಳುವುದು?

ಈ) ಇನ್ನೆಷ್ಟು ಸಮಯದೊಳಗೆ ಆ ಕೇಸುಗಳ ತೀರ್ಮಾನವನ್ನು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):